ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹುಬ್ಬಳ್ಳಿ

ಸಿ ಸಿ ನಂಃ 1634-2022

ಫಿರ್ಯಾದುದಾರರು :- ಪಿ.ಐ.ಪೂರ್ವ ಟ್ರಾಫಿಕ್ ಪೋಲಿಸ್ ಠಾಣೆ, ಹುಬ್ಬಳ್ಳಿ.

ಃವಿರುದ್ಧ ಃ

ಆರೋಪಿ :- ರಾಜೇಶ ಮುನಿರತಿನಂ ತಂದೆ ಮುನಿರತಿನಂ
ವಯಸ್ಸುಃ **25** ವರ್ಷ,
ವಿಳಾಸಃ ಮನೆ ನಂ.**30**, ಶಾಂತಿನಗರ
ಕೇಶವಪುರ, ಹುಬ್ಬಳ್ಳಿ.

ಆಪಾದನೆ

ನಾನು ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಹುಬ್ಬಳ್ಳಿ,

ಆರೋಪಿತನಾದ ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿವೆಃ
ಆರೋಪಿತನಾದ ನೀನು ಹುಬ್ಬಳ್ಳಿ ಪೂರ್ವ ಸಂಚಾರ ಠಾಣಾ ಹದ್ದಿಯಲ್ಲಿ ದಿಃ 22.02.2022 ರಂದು ಸಾಯಂಕಾಲ 7 ರಿಂದ 7.10 ರ ಅವಧಿಯಲ್ಲಿ ನೀನು ನಿನ್ನ ಕಾರ್ ನಂ. ಕೆಎ-25/ಜಡ್ 8317 ನೇದ್ದನ್ನು ಸರ್ವೋದಯ ಸರ್ಕಲ್ ಹತ್ತಿರ ಇರುವ ಬಸವೇಶ್ವರ ಮೂರ್ತಿ ಮತ್ತು ಸಿಟಿ ಬಸ್ ನಿಲ್ದಾಣ ಸಮೀಪ ಸಾರ್ವಜನಿಕ ರಸ್ತೆಯ ಮೇಲೆ ಅತೀ ವೇಗ ಮತ್ತು ನಿರ್ಲಕ್ಷ್ಯತನದಿಂದ ಹಾಗೂ ಅತೀವದುಡುಕತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಸರ್ವೊದಯ ಸರ್ಕಲ್ ಕಡೆಯಿಂದ ಕುಸುಗಲ್ ಕಡೆಗೆ ಹೋಗುವ ಮೋಟರ್ ಸೈಕಲ್ ನಂ. ಕೆಎ-25/ಇಎನ್-1250 ನೇದ್ದರ ಹಿಂಬದಿ ಡಿಕ್ಕಿಪಡಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುವಂತೆ ಮಾಡಿದ ಕಾರಣ ನಿನ್ನ ಮೇಲೆ ಸದರಿ ಆಪಾದನೆ ಇದೆ.

ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಹಾಗೂ ಅಪಘಾತದಲ್ಲಿ ಮೋಟರ್ ಸೈಕಲ್ ಮೇಲೆ ಹೊರಟ ಹಿಂಬದಿ ಸವಾರಳಾದ ಶ್ರೀಮತಿ ನಿರ್ಮಲಾ ಜೈನ್ ಇವಳಿಗೆ ರಸ್ತೆ ಮೇಲೆ ಕೆಡವಿ, ಅವಳ ಮೈಮೇಲೆ ಕಾರ್ ಚಲಾಯಿಸಿ, ಗಂಭೀರ ಸ್ವರೂಪದ ಗಾಯಪಡಿಸಿ ನಿರ್ಲಕ್ಷ್ಯತನದಿಂದ ಹಾಗೂ ಮಾನವನರ್ಹತೆಯಲ್ಲದ ಮರಣಕ್ಕೊಳಪಡಿಸಿ (Not amounting to culpable homicide) ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304 ಎ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುವಂತೆ ಮಾಡಿದ ಕಾರಣ ನಿನ್ನ ಮೇಲೆ ಸದರಿ ಆಪಾದನೆ ಇದೆ.

ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಹಾಗೂ ಅಪಘಾತ ಆದ ನಂತರ ಗಾಯಾಳನ್ನು ಆಸ್ಪತ್ರೆಗೆ ಸಾಗಿಸದೆ ಹಾಗೂ ಅಪಘಾತದ ಬಗ್ಗೆ ಸಂಬಂದಪಟ್ಟ ಪೋಲಿಸರಿಗೆ ಮಾಹಿತಿ ಕೊಡದೇ ಅಪಘಾತ ಸ್ಥಳದಿಂದ ಕಾರ್ ಸಮೇತ ಪರಾರಿಯಾಗಿ ಹೋಗಿ ಆ ಮೂಲಕ ಮೋಟಾರು ವಾಹನ ಕಾಯಿದೆ ಕಲಂ 134 ಎ ಮತ್ತು ಬಿ ಮತ್ತು ಮೋಟಾರು ವಾಹನ ಕಾಯಿದೆ 187 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುವಂತೆ ಮಾಡಿದ ಕಾರಣ ನಿನ್ನ ಮೇಲೆ ಸದರಿ ಆಪಾದನೆ ಇದೆ.

<u>ಆಪಾದನೆ</u>

ಪ್ರಶ್ನೆ 1 : ಮೇಲೆ ಓದಿ ಹೇಳಲಾದ ಆಪಾದನೆಯು ನಿಮಗೆ ತಿಳಿಯಿತೆ
ಉತ್ತರ :

ಪ್ರಶ್ನೆ 2 : ನಿಮ್ಮ ಮೇಲೆ ಇರುವ ಆಪಾದನೆಯನ್ನು ಒಪ್ಪಿಕೊಳ್ಳುವೆಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ :

(ಮೇಲ್ಕಂಡ ಆಪಾದನೆ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರ ಉತ್ತರವನ್ನು ತೆಗೆದುಕೊಳ್ಳಲಾಯಿತು)

ಹುಬ್ಬಳ್ಳಿ
ದಿಃ 22.12.2022

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ. ಹುಬ್ಬಳ್ಳಿ.

ಆರೋಪಿತನ ಪರ ವಕೀಲರ ಸಹಿ